ಭಾನುವಾರ 23.11.2025
ಬೆಂಗಳೂರು, ಬೆಲೆ: 5ರೂ,
2 ಪುಟಗಳು
ಸಂಪುಟ 01 - ಸಂಚಿಕೆ 106
Digital Varthe Kannada Daily
Volume 01 - Issue 106
Sunday 23.11.2025
Price: 5/- Rs
2 Pages Bangalore

PRGI/RNI: KNKAN/25/A1348

# ಡಿಜಿಟಲ್ ವಾರ್ತೆ

ಕನ್ನಡಿಗರ ಶಕ್ತಿ
ಕನ್ನಡ ದಿನಪತ್ರಿಕೆ

DIGITAL VARTHE
digitalvarthe@gmail.com
www.digitalvarthe.com

## ಕೊಲ್ಲಂನಲ್ಲಿ ಎರಡು ದೊಡ್ಡ ಮೀನುಗಾರಿಕಾ ಹಡಗುಗಳು ಭಸ್ಮ



**ಕೇರಳ:** ಕೊಲ್ಲಂ ಜಿಲ್ಲೆಯ ನೀರಯಿನತ್ತಮ್ ಬಂದರು ಪ್ರದೇಶದಲ್ಲಿ ಇಂದು ಬೆಳಗ್ಗೆ ಭಯಾನಕ ಬೆಂಕಿ ಅವಘಡ ಸಂಭವಿಸಿದೆ. ಎರಡು ದೊಡ್ಡ ಮೀನುಗಾರಿಕಾ ಹಡಗುಗಳು ಕೆಲವೇ ನಿಮಿಷಗಳಲ್ಲಿ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿವೆ. ಬೆಂಕಿಯ ಜ್ವಾಲೆಗಳು ಆಕಾಶವನ್ನೇ ಮುಟ್ಟುವಂತೆ ಕಾಣುತ್ತಿದ್ದ ದೃಶ್ಯಗಳು ಸ್ಥಳೀಯರನ್ನು ಬೆಚ್ಚಿ ಬೀಳಿಸಿವೆ. ಅವಘಡದ ವಿವರ ಬೆಳಗ್ಗೆ ಸುಮಾರು 6:30ರ ಸುಮಾರಿಗೆ "ಸೇಂಟ್ ಆಂಟೋನಿ" ಮತ್ತು "ಸೇಂಟ್ ಜೋಸೆಫ್" ಎಂಬ ಎರಡು ದೋಣಿಗಳಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡಿದೆ.

ಮಾಹಿತಿ ಪ್ರಕಾರ, ಒಂದು ದೋಣಿಯ ಅಡುಗೆ ಕೋಣೆಯಲ್ಲಿ ಗ್ಯಾಸ್ ಸಿಲಿಂಡರ್ ಸೋರಿಕೆಯಿಂದಾಗಿ ಬೆಂಕಿ ಉಂಟಾಗಿದೆ ಎಂದು ತಿಳಿದುಬಂದಿದೆ. ಕ್ಷಣಾರ್ಧದಲ್ಲಿ ಬೆಂಕಿ ಡೀಸೆಲ್ ಟ್ಯಾಂಕ್‌ಗೆ ಹರಡಿ ಭುಗಿಲೆದ್ದಿದೆ. ಜ್ವಾಲೆಗಳು ಹತ್ತಿರದಲ್ಲೇ ನಿಲ್ಲಿಸಿದ್ದ ಇನ್ನೊಂದು ದೋಣಿಗೆ ಕೂಡ ಹೊಡೆತ ಬೀರಿ, ಎರಡೂ ಹಡಗುಗಳು ಕೆಲವೇ ನಿಮಿಷಗಳಲ್ಲಿ ಸಂಪೂರ್ಣ ದಹನಕ್ಕೀಡಾಗಿವೆ. ಧೈರ್ಯದ ಕಾರ್ಮಿಕರ ತ್ಯಾಗ ಬೆಂಕಿ ಇತರ ದೋಣಿಗಳಿಗೆ ಹರಡದಂತೆ ತಡೆಯಲು ಸ್ಥಳೀಯ ಮೀನುಗಾರರಾದ ರಾಜು (45) ಮತ್ತು ಅಶೋಕ್ (38) ಧುಮುಕಿದ್ದಾರೆ. ತಮ್ಮ ಜೀವಕ್ಕೆ ತೊಂದರೆಯನ್ನೂ ನೋಡದೆ ಬೆಂಕಿ ಆವೃತವಾಗಿದ್ದ ಹಡಗುಗಳ ನಡುವಿನ ಹಗ್ಗಗಳನ್ನು ಬಿಚ್ಚಿ, ಎರಡೂ ದೋಣಿಗಳನ್ನು ಬೇರ್ಪಡಿಸಿದ್ದಾರೆ. ಈ ಸಾಹಸದ ಕಾರ್ಯದಲ್ಲಿ ಇಬ್ಬರಿಗೂ ಕೈ-ಕಾಲುಗಳಲ್ಲಿ ಸಣ್ಣಪುಟ್ಟ ಸುಟ್ಟ ಗಾಯಗಳಾಗಿವೆ. ಸ್ಥಳಕ್ಕೆ ಧಾವಿಸಿದ ಆಸ್ಪತ್ರೆ ಸಿಬ್ಬಂದಿ ತಕ್ಷಣ ಚಿಕಿತ್ಸೆ ನೀಡಿದ್ದು, ಇಬ್ಬರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಅಗ್ನಿಶಾಮಕ ದಳದ ತಡವಾದ ಆಗಮನ ಅವಘಡದ ಮಾಹಿತಿ ಬಂದ ತಕ್ಷಣ ಕೊಲ್ಲಂ ಫೈರ್ ಫೋರ್ಸ್‌ನ ಮೂರು ಯೂನಿಟ್‌ಗಳು ಸ್ಥಳಕ್ಕೆ ಧಾವಿಸಿದವು. ಆದರೆ ಬಂದರು ಪ್ರದೇಶದಲ್ಲಿ ರಸ್ತೆ ಸಂಕೀರ್ಣತೆ ಮತ್ತು ದೋಣಿಗಳು ನೀರಿನಲ್ಲಿ ಇರುವುದರಿಂದ ಬೆಂಕಿ ನಂದಿಸಲು ಸ್ವಲ್ಪ ತಡವಾಗಿದೆ. ಬೆಂಕಿ ನೌಕೆಗಳ ಸಹಾಯದಿಂದ ಸುಮಾರು ಒಂದು ಗಂಟೆ ಕಾಲ ನಡೆದ ಕಾರ್ಯಾಚರಣೆಯ ಬಳಿಕ ಬೆಂಕಿಯನ್ನು ಪೂರ್ಣ ನಿಯಂತ್ರಣಕ್ಕೆ ತರಲಾಯಿತು. ಆದರೆ ಆಗಲೇ ಎರಡೂ ದೋಣಿಗಳು ಸಂಪೂರ್ಣ ಭಸ್ಮವಾಗಿದ್ದವು.

ಕೋಟ್ಯಂತರ ರೂಪಾಯಿ ನಷ್ಟ ಪ್ರತಿ ದೋಣಿಯೂ ಸುಮಾರು ₹80 ಲಕ್ಷದಿಂದ ₹1 ಕೋಟಿ ಮೌಲ್ಯದ್ದಾಗಿದ್ದು, ಒಟ್ಟು ₹2 ಕೋಟಿಗೂ ಅಧಿಕ ಮೌಲ್ಯದ ಹಡಗುಗಳು ನಾಶವಾಗಿವೆ.

ಈ ದೋಣಿಗಳಲ್ಲಿ ಇದ್ದ ಡೀಸೆಲ್, ಜಾಲರಿ ಸಾಮಗ್ರಿಗಳು, ಎಲೆಕ್ಟ್ರಾನಿಕ್ ಉಪಕರಣಗಳು ಸಹ ಸಂಪೂರ್ಣ ಹಾಳಾಗಿವೆ. ಸ್ಥಳೀಯ ಮೀನುಗಾರ ಸಮುದಾಯಕ್ಕೆ ಇದು ದೊಡ್ಡ ಆರ್ಥಿಕ ಆಘಾತವಾಗಿದೆ. ಸ್ಥಳಕ್ಕೆ ಕೊಲ್ಲಂ ಜಿಲ್ಲಾಧಿಕಾರಿ, ಎಸ್‌ಪಿ ಸೇರಿದಂತೆ ಉನ್ನತ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ನಷ್ಟದ ಮೊತ್ತ ಮತ್ತು ಪರಿಹಾರದ ಬಗ್ಗೆ ಶೀಘ್ರ ನಿರ್ಧಾರ ಕೈಗೊಳ್ಳಲಾಗುವುದು ಎಂದು ಜಿಲ್ಲಾಡಳಿತ ತಿಳಿಸಿದೆ.

## ಕೊಲೆ ಯತ್ನ ಪ್ರಕರಣ ಆರೋಪಿಗೆ ಆರ್ಥಿಕ ನೆರವು, ಆಶ್ರಯ ನೀಡಿದ ಕಾಂಗ್ರೆಸ್ ನಾಯಕಿ ಬಂಧನ



**ದಾವಣಗೆರೆ:** ಸಾಮಾಜಿಕ ಕಾರ್ಯಕರ್ತ ಹಾಗೂ ಜೆಡಿಎಸ್ ಮುಖಂಡ ಟಿ. ಅಸ್ಸರ್ ಮೇಲೆ ನಡೆದಿದ್ದ ಕೊಲೆ ಯತ್ನ ಪ್ರಕರಣ ಇದೀಗ ರಾಜಕೀಯ ತಿರುವು ಪಡೆದಿದೆ. ಈ ಪ್ರಕರಣದ ಪ್ರಮುಖ ಆರೋಪಿ ಖಾಲಿದ್ ಪೈಲ್ವಾನ್‌ಗೆ ಆರ್ಥಿಕ ನೆರವು ಮತ್ತು ಆಶ್ರಯ ಒದಗಿಸಿದ ಆರೋಪದ ಮೇಲೆ ಕಾಂಗ್ರೆಸ್ ನಾಯಕಿ ಸವಿತಾಬಾಯಿ ಮಲ್ಲೇಶ ನಾಯ್ಕರನ್ನು ದಾವಣಗೆರೆ ಆಜಾದ್ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನವೆಂಬರ್ 10ರಂದು ಸಂಜೆ ದಾವಣಗೆರೆಯ ಭಾಷಾ ನಗರದ ಐದನೇ ಕ್ರಾಸ್‌ನಲ್ಲಿ ಟಿಪ್ಪು ಜಯಂತಿ ಕಾರ್ಯಕ್ರಮ ಮುಗಿಸಿ ಮರಳುತ್ತಿದ್ದ ಟಿ. ಅಸ್ಸರ್ ಅವರನ್ನು ಅಡ್ಡಗಟ್ಟಿದ ಖಾಲಿದ್ ಪೈಲ್ವಾನ್ ಮತ್ತಿಬ್ಬರು ದುಷ್ಕರ್ಮಿಗಳು ಚಾಕುವಿನಿಂದ ಇರಿದಿದ್ದರು. ಗಂಭೀರ ಗಾಯಗೊಂಡ ಅಸ್ಸರ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಈಗ ಅವರು ಗುಣಮುಖರಾಗುತ್ತಿದ್ದಾರೆ. ಹಳೇ ದ್ವೇಷವೇ ಈ ದಾಳಿಗೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ನಡೆದ ತಕ್ಷಣ ಖಾಲಿದ್ ಪೈಲ್ವಾನ್ ನಾಪತ್ತೆಯಾಗಿದ್ದ. ಆಜಾದ್ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ತೀವ್ರ ಹುಡುಕಾಟ ಆರಂಭವಾಯಿತು. ಆದರೆ ಆರೋಪಿ ಎಲ್ಲಿ ಹೋದ ಎಂಬುದು ಯಾರಿಗೂ ಗೊತ್ತಿರಲಿಲ್ಲ. ತನಿಖೆಯಲ್ಲಿ ಬೆಳಕಿಗೆ ಬಂದ ಸತ್ಯ ಎಲ್ಲರನ್ನೂ ಬೆಚ್ಚಿ ಬೀಳಿಸಿತು. ಕಾಂಗ್ರೆಸ್‌ನ ಪ್ರಮುಖ ಮುಖಂಡೆ ಸವಿತಾಬಾಯಿ ಮಲ್ಲೇಶ ನಾಯ್ಕ ಅವರೇ ಆತನಿಗೆ ಆಶ್ರಯ ಮತ್ತು ಹಣದ ಸಹಾಯ ಮಾಡುತ್ತಿದ್ದರು ಎಂಬ ಮಾಹಿತಿ ಬಯಲಾಗಿದೆ

ತನಿಖಾಧಿಕಾರಿಗಳ ಪ್ರಕಾರ, ಹಲ್ಲೆ ನಡೆದ ಒಂದೇ ವಾರದೊಳಗೆ ಖಾಲಿದ್ ಮತ್ತು ಸವಿತಾ ಇಬ್ಬರೂ ಗೋವಾ, ದೆಹಲಿ ಸೇರಿದಂತೆ ಹಲವು ನಗರಗಳಿಗೆ ರಹಸ್ಯ ಪ್ರವಾಸ ಮಾಡಿದ್ದಾರೆ. ಐಷಾರಾಮಿ ಹೋಟೆಲ್‌ಗಳಲ್ಲಿ ಉಳಿದುಕೊಂಡಿದ್ದಾರೆ, ಆರಾಮವಾಗಿ ಸುತ್ತಾಡಿದ್ದಾರೆ. ಇದಕ್ಕೆಲ್ಲ ದೊಡ್ಡ ಮೊತ್ತದ ಹಣ ಖರ್ಚಾಗಿದೆ. ಆ ಹಣವನ್ನೂ ಸವಿತಾ ಅವರೇ ಒದಗಿಸಿದ್ದಾರೆ ಎನ್ನಲಾಗಿದೆ ದಾವಣಗೆರೆಯ ಮಾಯಕೊಂಡ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಆಶಿಸಿದ್ದವರು. ಟಿಕೆಟ್ ಸಿಗದಿದ್ದಾಗ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು. ನಂತರ ಮತ್ತೆ ಕಾಂಗ್ರೆಸ್‌ಗೆ ಮರಳಿದ್ದರು. ಜಿಲ್ಲೆಯಲ್ಲಿ ಗಣ್ಯ ವ್ಯಕ್ತಿಯಾಗಿ, ಮಹಿಳಾ ಘಟಕದ ಪ್ರಮುಖ ನಾಯಕಿಯಾಗಿ ಗುರುತಿಸಿಕೊಂಡಿದ್ದವರು. ಆದರೆ ಈಗ ಕೊಲೆ ಯತ್ನ ಆರೋಪಿಗೆ ನೆರವು ನೀಡಿದ ಆರೋಪದಲ್ಲಿ ಜೈಲಿಗೆ ಹೋಗುವ ಸ್ಥಿತಿ ಎದುರಾಗಿದೆ.

ಪೊಲೀಸರು ತಾಂತ್ರಿಕ ತನಿಖೆ, ಮೊಬೈಲ್ ಲೊಕೇಷನ್, ಹೋಟೆಲ್ ರೆಕಾರ್ಡ್‌ಗಳು ಮತ್ತು ಬ್ಯಾಂಕ್ ವಹಿವಾಟುಗಳನ್ನು ಪರಿಶೀಲಿಸಿ ಇಬ್ಬರ ಚಲನವಲನಗಳನ್ನು ಟ್ರೇಸ್ ಮಾಡಿದ್ದಾರೆ. ಅಂತಿಮವಾಗಿ ಬೆಂಗಳೂರಿನಲ್ಲಿ ಸವಿತಾ ಅವರನ್ನು ಬಂಧಿಸಲಾಯಿತು.

## ನೇತಾಜಿ ಮುಲಾಯಂ ಸಿಂಗ್ ಯಾದವ್ ಅವರ ಪರಿಶ್ರಮ ಯುವಜನತೆಗೆ ಸ್ಫೂರ್ತಿ: ಯುವಜನಸಭಾ ಅಧ್ಯಕ್ಷ ಆನಂದ್ ಸಿ. ತಿರುಮಲಎಆರ್ ಟಿಒ ಜಿಬಿ. ಸುದೀರ್ ಕರೆ



**ಬೆಂಗಳೂರು** :ಪ್ರತಿ ಗ್ರಾಮಗಳಿಗೆ ಸೈಕಲ್ ನಲ್ಲಿ ಪ್ರಚಾರ ಮಾಡಿ ಸಮಾಜವಾದಿ ಪಕ್ಷ ಸಂಘಟಿಸಿದ ಮಹಾನ್ ನಾಯಕ ನೇತಾಜಿ ಶ್ರೀ ಮುಲಾಯಂ ಸಿಂಗ್ ಯಾದವ್ ಜೀ ಎಂದು ರಾಜ್ಯ ಮುಖ್ಯ ಪ್ರಧಾನ ಕಾರ್ಯದರ್ಶಿ ಜಯರಾಮ್ ಜಿ ಸಿ ರೆಡ್ಡಿ ಹೇಳಿದರು. ಅವರು ಸಮಾಜವಾದಿ ಪಾರ್ಟಿ ಯುವಜನ ಸಭಾ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ ನೇತಾಜಿ ಮಾಜಿ ಮುಖ್ಯ ಮಂತ್ರಿ ನೇತಾಜಿ ಶ್ರೀ ಮುಲಾಯಂ ಸಿಂಗ್ ಯಾದವ್ ಜೀ ರವರ 86ನೇ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಪುಷ್ಪರ್ಚನೆ ಮಾಡಿ ಮಾತನಾಡಿ ಸಮಾಜವಾದಿಗಳಾಗಿ ಸುಮಾರು 4 ದಶಕಗಳ ಕಾಲ ಇಡೀ ಉತ್ತರ ಪ್ರದೇಶ ವನ್ನು ಬರೀ ಸೈಕಲ್ ನಲ್ಲಿ ಪ್ರವಾಸ ಮಾಡಿ ಪಕ್ಷ ಸಂಘಟನೆ ಮಾಡಿದ ನಾಯಕರುಗಳಿಗೆ ಅವರು ಸಮಾಜದಲ್ಲಿ ಶೋಷಣೆ ಯಲ್ಲಿ ತೊಡಗಿದ ಪ್ರತಿಯೊಬ್ಬರನ್ನು ಒಟ್ಟುಗೂಡಿಸಿ ಬಡವರು ಕೂಲಿ ಕಾರ್ಮಿಕರ ಅಭಿರುದ್ದಿ ಗಾಗಿ ಶ್ರಮಿಸಿದವರು ನಮ್ಮ ನಾಯಕ ಎಂದು ಹೇಳಿದರು.

ಸಮಾಜವಾದಿ ಯುವ ಜನ ಸಭಾ ರಾಜ್ಯ ಅಧ್ಯಕ್ಷ ಆನಂದ್ ಸಿ ತಿರುಮಲ ಮಾತನಾಡಿ ಕಳೆದ ನಲವತ್ತು ವರ್ಷಗಳಿಂದ ಸಮಾಜವಾದಿ ಪಕ್ಷವನ್ನು ಅಧಿಕಾರಕ್ಕೆ ತಂದು ಇಡೀ ದೇಶದಲ್ಲಿ ಉತ್ತರ ಪ್ರದೇಶವನ್ನು ಮಾದರಿ ರಾಜ್ಯೋವನ್ನಾಗಿ ರೂಪಿಸಿದ ಮಹಾನ್ ಚೇತನ ನೇತಾಜಿ ಶ್ರೀ ಮುಲಾಯಂ ಸಿಂಗ್ ಯಾದವ್ ಜೀ ರವರು ಅವರ ಪರಿಶ್ರಮ ಇಡೀ ದೇಶದ ಯುವ ಜನತೆಗೆ ಸ್ಫೂರ್ತಿ ಯಾಗಿದೆ ಬಡವರ, ಯುವಜನರಿಗೆ ನೂರಾರು ಯೋಜನೆಗಳನ್ನು ರೂಪಿಸಿದವರು ಅವರು ಜನ್ಮದಿನದ ಆಚರಣೆ ನಮ್ಮಗೆ ಹೆಮ್ಮೆಯ ವಿಚಾರವಾಗಿದೆ ಎಂದು ಹೇಳಿದರು.

ರಾಜರಾಜೇಶ್ವರಿ ನಗರದ ವಿಧಾನ ಸಭಾ ಕ್ಷೇತ್ರ ದ ಜೆಡಿಎಸ್ ನ ಯುವ ಮುಖಂಡರಾದ ಮುನಿ ಕುಮಾರ್ ಮಾತನಾಡಿ ದೇಶದಲ್ಲಿ ಸಮಾಜವಾದಿ ನಾಯಕರಾಗಿ ಅನೇಕ ಯುವ ಜನರಿಗೆ, ಶೋಷಿತರರನ್ನು ಅಭಿರುದ್ದಿ ಗೊಳಿಸಿ ಸಮಾಜದಲ್ಲಿ ಸಾಮಾನ್ಯರಿಗೂ ಸಮಾನತೆಗಾಗಿ ದುಡಿದು ಪಕ್ಷ ಸಂಘಟಿಸಿದ ಸಮಾಜವಾದಿ ನಾಯಕರು ನೇತಾಜಿ ಮುಲಾಯಂ ಸಿಂಗ್ ಯಾದವ್ ಜೀ ರವರು ಎಂದು ಹೇಳಿದರು0.

ಕಾರ್ಯಕ್ರಮದಲ್ಲಿ ಸಮಾಜವಾದಿ ಪಕ್ಷದ ರಾಜ್ಯ ಅಧ್ಯಕ್ಷ ಎನ್ ಮಂಜಪ್ಪ ಯಾದವ್ ಜೀ ಸಮಾಜವಾದಿ ಯುವಜನ ಸಭಾ ಅಧ್ಯಕ್ಷ ಆನಂದ್ ಸಿ ತಿರುಮಲ ಜೀ, ಜೆಡಿಎಸ್ ಯುವ ನಾಯಕರು ಮುನಿಕುಮಾರ್ ಜೀ, ರುದ್ರೇಶ್ ಜೀ ರಾಜ್ಯ ಸಂಘಟನ ಕಾರ್ಯದರ್ಶಿ ರಂಗನಾಥ್ ಎಲ್ ಪತ್ರೊಟಿ ಜೀ, ಸಮಾಜವಾದಿ ರಿಚಾರ್ಡ್, ಸಮಾಜವಾದಿ ಪುಟ್ಟರಾಜು ಯಾದವ್,ಇತರರು ಇದ್ದರು.


ಸುದ್ದಿ ಹಾಗೂ ಜಾಹಿರಾತುಗಳಿಗಾಗಿ
ಸಂಪರ್ಕಿಸಿ: 9538786812 / 9880655634

## ಕನ್ನಡ ರಾಜ್ಯೋತ್ಸವಕ್ಕೆ ಅನ್ಯಭಾಷಿಕರ ವಿರೋಧ ದೂರು ದಾಖಲಿಸಿದ ಕರವೇ.



**ಯಲಹಂಕ**: ಉಪನಗರದ ಪೂರ್ವಾಂಕರ ಅಪಾರ್ಟ್ಮೆಂಟ್‌ನಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಅಡ್ಡಪಡಿಸಿ, ಆಯೋಜಕರ ಮೇಲೆ ದಬ್ಬಾಳಿಕೆ ನಡೆಸಿದ ಗಂಭೀರ ಘಟನೆ ಸಂಭವಿಸಿದೆ. ಈ ಕೃತ್ಯವನ್ನು ತೀವ್ರವಾಗಿ ಖಂಡಿಸಿದ ಕರ್ನಾಟಕ ರಕ್ಷಣಾ ವೇದಿಕೆಯ ಯಲಹಂಕ ಘಟಕದ ಅಧ್ಯಕ್ಷ ಪ್ರಕಾಶ್ ಗೌಡ ಮತ್ತು ಪದಾಧಿಕಾರಿಗಳ ತಂಡ, ರಾಜ್ಯಾಧ್ಯಕ್ಷ ಟಿ.ಎ. ನಾರಾಯಣ ಗೌಡ ಅವರ ನಿರ್ದೇಶನದಂತೆ ಸ್ಥಳೀಯ ಪೊಲೀಸ್ ಠಾಣೆಯನ್ನು ಸಂಪರ್ಕಿಸಿ ಅಧಿಕೃತ ದೂರು ದಾಖಲಿಸಿದ್ದಾರೆ. ದೂರು ದಾಖಲಿಸುವ ಸಂದರ್ಭದಲ್ಲಿ, ಸಂಬಂಧಿಸಿದವರ ವಿರುದ್ಧ ತಕ್ಷಣ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ಅವರು ಜೋರಾಗಿ ಆಗ್ರಹಿಸಿದ್ದು, ಪ್ರಕರಣ ದಾಖಲಾದ ನಂತರವೂ ಅಗತ್ಯ ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟಕ್ಕೆ ಇಳಿಯುವಂತೆ ಸ್ಪಷ್ಟ ಎಚ್ಚರಿಕೆ ನೀಡಿದ್ದಾರೆ. ದೂರು ಸಲ್ಲಿಕೆಯಲ್ಲಿ ಘಟಕದ ಅಧ್ಯಕ್ಷ ಪ್ರಕಾಶ್ ಗೌಡ, ಉಪಾಧ್ಯಕ್ಷ ವೆಂಕಟೇಶ್ ಸೇರಿದಂತೆ ಹಲವಾರು ಹೋರಾಟಗಾರರು ಉಪಸ್ಥಿತರಿದ್ದರು.

## ಹಾಸ್ಟೆಲ್‌ನ 4ನೇ ಮಹಡಿಯಿಂದ ಜಿಗಿದು ನರ್ಸಿಂಗ್ ವಿದ್ಯಾರ್ಥಿನಿ ಆತ್ಮಹತ್ಯೆ



**ಹೈದರಾಬಾದ್:** ಆಂಧ್ರಪ್ರದೇಶದ ಕುಪ್ಪಂನಲ್ಲಿ ನರ್ಸಿಂಗ್ ವಿದ್ಯಾರ್ಥಿನಿಯೊಬ್ಬಳು ಹಾಸ್ಟೆಲ್ ಕಟ್ಟಡದ 4ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆಗೆ ಶರಣಾಗಿದ್ದಾಳೆ. ಆತ್ಮಹತ್ಯೆಗೆ ಶರಣಾದ ಯುವತಿಯನ್ನು ಪಲ್ಲವಿ ಎಂದು ಗುರುತಿಸಲಾಗಿದೆ. ಆಕೆ ಕುಪ್ಪಂನ ಖಾಸಗಿ ಕಾಲೇಜೊಂದರಲ್ಲಿ 2ನೇ ವರ್ಷದ ಬಿಎಸ್ಸಿ ನರ್ಸಿಂಗ್ ಓದುತ್ತಿದ್ದಳು. ಯುವತಿ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದಳು. ನ.20 ರಂದು ಆಕೆ ಹಾಸ್ಟೆಲ್ ಕಟ್ಟಡದಿಂದ ಜಿಗಿದಿದ್ದಳು.

ಗಾಯಗೊಂಡಿದ್ದ ಪಲ್ಲವಿಯನ್ನು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸೇರಿ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಿಸದೇ ನ.21 ರಂದು ಆಕೆ ಸಾವನ್ನಪ್ಪಿದ್ದಾಳೆ ಎಂದು ಮೂಲಗಳು ತಿಳಿಸಿವೆ.

ಹಾಸ್ಟೆಲ್ ಕಟ್ಟಡದಿಂದ ಆಕೆ ಜಿಗಿದಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಯುವತಿಯ ಕುಟುಂಬಸ್ಥರು ಕಾಲೇಜು ಸಿಬ್ಬಂದಿಯೇ ಆಕೆಯ ಸಾವಿಗೆ ಕಾರಣ ಎಂದು ಆರೋಪಿಸಿದ್ದಾರೆ. ಪೊಲೀಸರು ಶಂಕಿತ ಆತ್ಮಹತ್ಯೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

## ಶಿಕ್ಷಣಕ್ಕೆ ಮೊದಲ ಆದ್ಯತೆ ಅಗತ್ಯ, ಸಂವಿಧಾನ ಪೀಠಿಕೆಯ ಅರಿವಿಗೆ ಕಡ್ಡಾಯ: ಡಾ. ಕೆ. ರಾಮಚಂದ್ರಪ್ಪ



**ದೇವನಹಳ್ಳಿ** :- ಶಿಕ್ಷಣದಲ್ಲಿ ಮುಂದುವರೆದವರು ಸಮಾಜದ ಉನ್ನತ ಮಟ್ಟದಲ್ಲಿ ಬೆಳೆದು ಸಮಾಜವನ್ನು ಪ್ರಬಲವಾಗಿ ನಿರ್ವಹಿಸಬಲ್ಲ ಶಕ್ತಿ ಅವರಲ್ಲಿ ಅರಳ ಲಿದ್ದು ಅಂಬೇಡ್ಕರ್ ಅವರ ನಿಜವಾದ ಕನಸು-ನನಸಾ ಗಿಸಲು ಪ್ರತಿಯೊಬ್ಬರು ಶಿಕ್ಷಣದಿಂದ ವಂಚಿತ ರಾಗ ಬಾರದು ಎಂದು ಡಾ.ಕೆ.ರಾಮಚಂದ್ರಪ್ಪ ಅಬ್ರಹಾಂ ಕಾರ್ಯಕರ್ತರಿಗೆ ತಿಳುವಳಿಕೆ ನೀಡಿದರು.

ದೇವನಹಳ್ಳಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನ್ಯಾಷನಲ್ ಹ್ಯೂಮನ್ ರೈಟ್ಸ್ ಕೌನ್ಸಿಲ್ ಇನ್ ಇಂಡಿಯಾ ಸಂಸ್ಥೆ ಏರ್ಪಡಿಸಿದ್ದ ನೂತನ ಪದಾಧಿ ಕಾರಿಗಳಿಗೆ ನೇಮಕಾತಿ ಪ್ರಮಾಣ ಪತ್ರ ವಿತರಣೆ ಹಾಗೂ ಕಾರ್ಯ ನಿರತ ಪತ್ರ ಕರ್ತರ ಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಕ್ಕೆ ನೂತನವಾಗಿ ಆಯ್ಕೆಯಾದ ಜಗದೀಶ.ವಿ ಅವರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಂದು ನ್ಯಾಷನಲ್ ಹ್ಯೂಮನ್ ರೈಟ್ಸ್ ಕೌನ್ಸಿಲ್ ಇನ್ ಇಂಡಿಯಾ ಸಂಸ್ಥೆ ಸಂಸ್ಥಾಪರಾದ ಡಾ. ಕೆ.ರಾಮ ಚಂದ್ರಪ್ಪ ಅಬ್ರಹಾಂ ತಿಳಿಸಿದ್ದಾರೆ.

ನ್ಯಾಷನಲ್ ಹ್ಯೂಮನ್ ರೈಟ್ಸ್ ಕೌನ್ಸಿಲ್ ಇನ್ ಇಂಡಿ ಯಾ ಸಂಸ್ಥೆ ರಾಷ್ಟ್ರೀಯ ಅಧ್ಯಕ್ಷ ಸಂಪತ್ತು ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಾನವ ಹಕ್ಕು ಗಳಿಗೆ ದಕ್ಕೆ ಬರುವ ನೂರಾರು ಪ್ರಕರಣಗಳನ್ನು ಸಾರ್ವಜನಿಕರು ಎದುರಿಸುತ್ತಿದ್ದಾರೆ ಅವರ ಕಷ್ಟ ಸುಖ ನೋವು-ನಲಿವುಗಳಿಗೆ ನ್ಯಾಷನಲ್ ಹ್ಯೂಮನ್ ರೈಟ್ಸ್ ಕೌನ್ಸಿಲ್ ಇನ್ ಇಂಡಿಯಾ ಸಂಸ್ಥೆ ಶ್ರಮಿಸುತ್ತಿದೆ.


ಭ್ರಷ್ಟರನ್ನು ಶಿಕ್ಷಿಸಲು ಸಂವಿಧಾನವನ್ನು ಎತ್ತಿ ಹಿಡಿಯ ಬೇಕಿದ್ದರೆ ಶಿಕ್ಷಣದಿಂದ ಮಾತ್ರ ಸಾಧ್ಯ. ಮಾನವ ಹಕ್ಕುಗಳು ನಮ್ಮಲ್ಲಿನ ಪ್ರತಿ ಯೊಬ್ಬರಿಗೂ ಸಮಾನ ವಾಗಿರುತ್ತದೆ. ಪ್ರಜ್ಞಾವಂತರ ಘನತೆಯನ್ನು ಗುರುತಿ ಸುವ ಮತ್ತು ರಕ್ಷಿಸುವ ಮಾನದಂಡಗಳನ್ನು ಉಳಿಸಿ ಬೆಳೆಸಲೆಂದು ನಮ್ಮ ಸಂಸ್ಥೆ ಕಳೆದ ಹಲವು ವರ್ಷ ಗಳಿಂದ ಕಾರ್ಯನಿರ್ವಹಿಸುತ್ತಿದೆ.

ಸಂವಿಧಾನ ಶಿಲ್ಪಿ ಡಾಕ್ಟರ್ ಡಾ. ಬಿಆರ್. ಅಂಬೇಡ್ಕರ್ ಅವರು ಪ್ರತಿಯೊಬ್ಬ ನಾಗರಿಕನಿಗೂ ತನ್ನದೇ ಆದ ಗೌರವ ನೀಡಬೇಕು ಹಾಗೂ ಪಡೆದುಕೊಳ್ಳಬೇಕು ಎಂಬ ಆಶಯವನ್ನು ಸಂವಿಧಾನದಲ್ಲಿ ಅಳವಡಿಸಿದ್ದು ಅದನ್ನು ಸಂವಿಧಾನ ಪೀಠಿಕೆಯ ವ್ಯಾಪ್ತಿಗೆ ಬರುವ ಕಲಿಕಾ ಸಂಸ್ಥೆಗಳು ನಿರ್ಲಕ್ಷ ತೋರುತ್ತಿರುವುದು ಖಂಡನೀಯ.

ಭಾರತ ದೇಶದ ಸಮಗ್ರ ಅಭಿವೃದ್ಧಿ ಹಾಗೂ ಪ್ರಗತಿಗೆ ಮಾನವ ಸಂಪನ್ಮೂಲ ಎಷ್ಟು ಮುಖ್ಯವೋ ಅಷ್ಟೇ ಪ್ರತಿಯೊಬ್ಬ ನಾಗರಿಕನ ಮಾನ ಪ್ರಾಣ ಗೌರವ ಕಾಪಾಡುವುದು ಕೂಡ ಪ್ರಮುಖವೆಂದು ಸಂಬಂಧ ಪಟ್ಟ ಎಲ್ಲಾ ಆಡಳಿತ ವ್ಯವಸ್ಥೆಗಳು ಅರ್ಥೈಸಿ ಕೊಳ್ಳಬೇಕೆಂ ದು ತಿಳುವಳಿಕೆ ನೀಡಿದರು

ಈ ಸಂದರ್ಭದಲ್ಲಿ ನ್ಯಾಷನಲ್ ಹ್ಯೂಮನ್ ರೈಟ್ಸ್ ಕೌನ್ಸಿಲ್ ಇನ್ ಇಂಡಿ ಯಾ ಸಂಸ್ಥೆ ಸಂಸ್ಥಾಪಕ ರಾಮ ಚಂದ್ರು, ರಾಷ್ಟ್ರೀಯ ಗೌರವಾಧ್ಯಕ್ಷ ಸಂಪತ್, ಎಕ್ಸಕ್ಯೂಟಿವ್ ಸದಸ್ಯರಾಗಿ ಸಂತೋಷ್ ಚರಿಯನ್, ರಾಷ್ಟ್ರೀಯ ಕಾರ್ಯದರ್ಶಿ ಶ್ರೀ ನಿವಾಸ್ ಮೂರ್ತಿ, ರಾಷ್ಟ್ರೀಯ ಅಡ್ವೈಸರ್ ನಾಮ ಶ್ರೀಧರ್, ನ್ಯಾಷನಲ್ ಅಡ್ವೈಸರ್ ಉದಯ್, ರಾಜ್ಯ ಅಧ್ಯಕ್ಷರಾಗಿ ರಾಜು, ಗೌರವಧ್ಯಕ್ಷ ದೇವರಾಜು, ಉಪಾಧ್ಯಕ್ಷ ಮಂಜುನಾಥ್, ಕಲಾವಿಭಾಗದ ವೆಂಕಟೇಶ್, ತಾಲೂಕು ಅಧ್ಯಕ್ಷ ಸುಬ್ರಮಣಿ, ಮಹಿಳಾ ಘಟಕ ಕಲಾವತಿ, ಪ್ರಧಾನ ಕಾರ್ಯದರ್ಶಿ ಲತಾ, ಹಿರಿಯ ಸಲಹೆಗರಾಗಿ ಅಂದಾ ನಪ್ಪ, ಸಂತೋಷ್ ಕುಮಾರ್, ಮನೋಹರ್,ಸುನೀಲ್, ವಿನರ್, ಸಂತೋಷ್ ಮೂರ್ತಿ, ಮಾಧ್ಯಮ ಸಲಹೆಗಾ ರರಾದ ರಾಮಾಂಜಿನಪ್ಪ, ರಾಜು ಸೇರಿದಂತೆ ಅನೇಕರು ಹಾಜರಿದ್ದರು.

## ಅಂಬರನಾಥ್ ಫ್ಲೈಓವರ್‌ನಲ್ಲಿ ದ್ವಿಚಕ್ರ ವಾಹನಗಳಿಗೆ ಕಾರು ಡಿಕ್ಕಿ



**ಥಾಣೆ:** ನಿಯಂತ್ರಣ ತಪ್ಪಿ ಕಾರೊಂದು ಎದುರಿನಿಂದ ಬರುತ್ತಿದ್ದ ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆದು ಉರುಳಿಬಿದ್ದ ಪರಿಣಾಮ ನಾಲ್ವರು ಸಾವನ್ನಪ್ಪಿದ್ದು, ಮೂವರು ಗಂಭೀರ ಗಾಯಗೊಂಡಿರುವ ಘಟನೆ ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಅಂಬರನಾಥ್ ಫ್ಲೈಓವರ್‌ನಲ್ಲಿ ನಡೆದಿದೆ.

ಶುಕ್ರವಾರ ಸಂಜೆ 7:15ರ ಸುಮಾರಿಗೆ ಈ ಅಪಘಾತ ಸಂಭವಿಸಿದೆ. ಅಪಘಾತದ ರಭಸಕ್ಕೆ ದ್ವಿಚಕ್ರ ವಾಹನದಲ್ಲಿದ್ದ ಸವಾರರೊಬ್ಬರು ಗಾಳಿಯಲ್ಲಿ ಹಾರಿ ಫ್ಲೈಓವರ್‌ನ ಕೆಳಗಿನ ರಸ್ತೆಗೆ ಬಿದ್ದಿದ್ದಾರೆ. ಕಾರಿನ ಚಾಲಕನ ನಿಯಂತ್ರಣ ತಪ್ಪಿ ವಾಹನ ನಾಲ್ಕರಿಂದ ಐದು ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆದು ನಂತರ ಮಗುಚಿ ಬಿದ್ದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಭೀಕರ ಅಪಘಾತದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಅಪಘಾತದಲ್ಲಿ ಶಿವಸೇನಾ ನಾಯಕ ಪ್ರಮೋದ್ ಚೌಬೆ ಅವರ ಚಾಲಕ ಸೇರಿದಂತೆ ನಾಲ್ವರು ಸಾವನ್ನಪ್ಪಿದ್ದಾರೆ. ಅಲ್ಲದೇ ಪ್ರಮೋದ್ ಚೌಬೆ ಅವರ ಪತ್ನಿ ಸುಮನ್ ಚೌಬೆ ಕೂಡ ಅಪಘಾತದಲ್ಲಿ ಗಾಯಗೊಂಡಿದ್ದಾರೆ.

## ನವೆಂಬರ್ 27 ರಂದು ನಿಮ್ಮ ಡಿಜಿಟಲ್ ವಾರ್ತೆ ದಿನಪತ್ರಿಕೆ ಹಾಗೂ ಡಿಜಿಟಲ್ ವಾಹಿನಿ ನೂತನ ಕಚೇರಿ ಉದ್ಘಾಟನೆಗೊಳ್ಳಲಿದ್ದು, ಸರ್ವರಿಗೂ ಆತ್ಮೀಯ ಆಮಂತ್ರಣ

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

## ನಾನೇ ಸಿಎಂ ಆಗಿ ಮುಂದುವರೆಯುತ್ತೇನೆ, ಇನ್ನೂ ಎರಡು ಬಜೆಟ್ ನಾನೇ ಮಂಡಿಸುತ್ತೇನೆ ಸಿಎಂ



**ಮೈ ಸೂ ರು** : ಕರ್ನಾಟಕದ ರಾಜಕೀಯದಲ್ಲಿ ನಾಯಕತ್ವ ಬದಲಾವಣೆಯ ಊಹಾಪೋಹಗಳು, ಸಂಪುಟ ಪುನರ್‌ರಚನೆಯ ಚರ್ಚೆಗಳು ಮುಂತಾದ ವಿಷಯಗಳು ಚುರುಕುಗೊಂಡಿರುವ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಮೈಸೂರಿನಲ್ಲಿ ಸಿಎಂ ಕುರ್ಚಿಗೆ ಯಾವುದೇ ಪೈಪೋಟಿಯಿಲ್ಲ. ಇನ್ನುಳಿದ 2.5 ವರ್ಷ ನಾನೆ ಸಿಎಂ ಆಗಿ ಮುಂದುವರೆಯುತ್ತೇನೆ ಎಂದು ಸ್ಪಷ್ಟನೆ ನೀಡಿದ್ದಾರೆ. ನಾನೇ ಸಿಎಂ ಆಗಿ ಮುಂದುವರೆಯುತ್ತೇನೆ. ಇನ್ನೂ ಎರಡು ಬಜೆಟ್‌ಗಳನ್ನು ಮಂಡಿಸುತ್ತೇನೆ. ನಿಮಗೆ ಯಾಕೆ ಅನುಮಾನ ? ಯಾಕೆ ಮತ್ತೆ ಮತ್ತೆ ಈ ಪ್ರಶ್ನೆ ಕೇಳುತ್ತೀರಿ ಎಂದು ಜನಸಂದರ್ಭದಲ್ಲಿ ಪ್ರಶ್ನೆಗೆ ಉತ್ತರಿಸುತ್ತಾ ಹೇಳಿದ್ದಾರೆ.

ಸಿದ್ದರಾಮಯ್ಯ ಅವರ ಈ ಹೇಳಿಕೆಯು ರಾಜ್ಯ ರಾಜಕೀಯದಲ್ಲಿ ಹೊಸ ಚರ್ಚೆಗೆ ಕಾರಣವಾಘಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗಿನ ಕುರ್ಚಿ ಹಂಚಿಕೆಯ ಚರ್ಚೆಗಳನ್ನು ಮತ್ತೊ ಮ್ಮೆ ಮುಂದೂಡಿದಂತಾಗಿದೆ. 2023ರ ವಿಧಾನಸಭೆ ಚುನಾವಣೆಯ ನಂತರ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇಬ್ಬರ ನಡುವೆಯೂ ಸಿಎಂ ಸ್ಥಾನಕ್ಕಾಗಿ ಭಾರೀ ಸ್ಪರ್ಧೆ ನಡೆದಿತ್ತು. ಕಾಂಗ್ರೆಸ್ ಹೈಕಮಾಂಡ್ ಶಿವಕುಮಾರ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಿ ಸಿದ್ದರಾಮಯ್ಯ ಅವರನ್ನು ಸಿಎಂ ಆಗಿ ಆಯ್ಕೆ ಮಾಡಿತ್ತು. ಈಗ ರಾಜ್ಯ ಸರ್ಕಾರದ ಐದು ವರ್ಷದ ಅವಧಿಯ ಮಧ್ಯಭಾಗದಲ್ಲಿ (ನವೆಂಬರ್ 2025) ನಾಯಕತ್ವ ಬದಲಾವಣೆಯ ಊಹಾಪೋಹಗಳು ಜೋರಾಗಿವೆ.

ಮೈಸೂರಿನಲ್ಲಿ ಇಂದು ಸಿದ್ದರಾಮಯ್ಯ , ಹೈಕಮಾಂಡ್‌ನ ನಿರ್ಧಾರಕ್ಕೆ ಬದ್ಧವಾಗಿರುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ. ನಾಯಕತ್ವ ಬದಲಾವಣೆ, ಸಂಪುಟ ಪುನರ್ರಚನೆ - ಎಲ್ಲವನ್ನೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ಇಲ್ಲಿಯವರೊಂದಿಗೆ ಏನಾದರೂ ಮಾತನಾಡಿದ್ದರೆ ತಿಳಿಸುತ್ತಾರೆ. ಇಲ್ಲದಿದ್ದರೆ ಈ ಪ್ರಶ್ನೆಗಳು ಯಾಕೆ ಹೈಕಮಾಂಡ್ ಹೇಳಿದ್ದನ್ನು ನಾನು, ಮಂತ್ರಿಗಳು, ಶಾಸಕರು - ಎಲ್ಲರೂ ಪಾಲಿಸಬೇಕು. ಹೈಕಮಾಂಡ್ ಹೇಳಿದ್ದು ಫೈನಲ್" ಎಂದು ಹೇಳಿದ್ದಾರೆ.

ಶಿವಕುಮಾರ್ ಅವರು ಶಾಸಕರ ದೆಹಲಿ ಭೇಟಿಯ ಬಗ್ಗೆ ಮಾತನಾಡಿದ್ದು, "ನಾಳೆ (ನವೆಂಬರ್ 22) ಖರ್ಗೆ ಅವರನ್ನು ಭೇಟಿಮಾಡುತ್ತೇನೆ" ಎಂದು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿ ಸಿದ್ದರಾಮಯ್ಯ, "ಶಾಸಕರ ದೆಹಲಿ ಭೇಟಿಯ ಬಗ್ಗೆ ಶಿವಕುಮಾರ್ ಅವರೇ ಹೇಳಿದ್ದಾರೆ. ಹೈಕಮಾಂಡ್‌ನೊಂದಿಗೆ ಚರ್ಚೆ ನಡೆಯುತ್ತದೆ. ಇಕ್ಬಾಲ್ ಹುಸೇನ್ ಅವರ ಹೇಳಿಕೆಯಂತೂ ಹೈಕಮಾಂಡ್ ಹೇಳಿದ್ದನ್ನು ಪಾಲಿಸಬೇಕು ಎಂದಷ್ಟೇ" ಎಂದು ಸ್ಪಷ್ಟಪಡಿಸಿದ್ದಾರೆ.

ಸಿದ್ದರಾಮಯ್ಯ ಅವರ ಈ ಹೇಳಿಕೆಯು ರಾಜ್ಯ ಕಾಂಗ್ರೆಸ್‌ನಲ್ಲಿ ಚರ್ಚೆಗೆ ಗುರಿಯಾಗಿದ್ದು, ಶಿವಕುಮಾರ್ ಪ್ರಶಾಂತರಾಗಿರುವುದು ಗಮನಕ್ಕೆ ಬಂದಿದೆ. 2023ರ ಚುನಾವಣೆಯ ನಂತರ ಹೈಕಮಾಂಡ್ ಇಬ್ಬರ ನಡುವೆಯ ಸಮತೋಲನವನ್ನು ಕಾಪಾಡಿಕೊಂಡಿತ್ತು. ಆದರೆ ಈಗ ಸರ್ಕಾರದ ಮಧ್ಯಭಾಗದಲ್ಲಿ ನಾಯಕತ್ವ ಬದಲಾವಣೆಯ ಒತ್ತಡ ಹೆಚ್ಚಾಗಿದೆ. ಸಿದ್ದರಾಮಯ್ಯ ಅವರು 16 ಬಜೆಟ್‌ಗಳನ್ನು ಮಂಡಿಸಿದ್ದು, 17ನೇ ಬಜೆಟ್ 2026ರಲ್ಲಿ ಮಂಡಿಸುವುದಾಗಿ ಸಿಎಂ ಸ್ಪಷ್ಟಪಡಿಸಿದ್ದಾರೆ ರಾಜ್ಯದಲ್ಲಿ ಕಾಂಗ್ರೆಸ್ ಶಾಸಕರಲ್ಲಿ ಸಿದ್ದರಾಮಯ್ಯ ಬೆಂಬಲಿಗರು ಮತ್ತು ಶಿವಕುಮಾರ್ ಬೆಂಬಲಿಗರ ನಡುವೆ ಭಾರೀ ವಿಭಜನೆಯಿದೆ

ಈ ಹೇಳಿಕೆಯು ಈ ವಿಭಜನೆಯನ್ನು ಇನ್ನಷ್ಟು ಗಾಢಗೊಳಿಸಬಹುದು. ಹೈಕಮಾಂಡ್ ಈಗ ದೆಹಲಿಯಲ್ಲಿ ಚರ್ಚೆ ನಡೆಸುತ್ತಿದ್ದು, ಸಂಪುಟ ವಿಸ್ತರಣೆ ಅಥವಾ ನಾಯಕತ್ವ ಬದಲಾವಣೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಬಹುದು. ಸಿದ್ದರಾಮಯ್ಯ ಅವರ ಹೇಳಿಕೆಯು ರಾಜ್ಯದ ರಾಜಕೀಯಕ್ಕೆ ಹೊಸ ತಿರುವು ನೀಡಿದ್ದು, ಇದಕ್ಕೆ ಶಿವಕುಮಾರ್ ಏನು ಹೇಳುತ್ತಾರೆ ಎಂದು ಕಾದುನೋಡಬೇಕಿದೆ.

## ದರೋಡೆ ಕೇಸಲ್ಲಿ 5.76 ಕೋಟಿ ಹಣ ಸೀಜ್ ಮಾಡಲಾಗಿದೆ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್



**ಬೆಂಗಳೂರು**: ಹಾಡಹಗಲೇ ಎಟಿಎಂಗೆ ಹಣ ತುಂಬಿಸುವ ವಾಹನ ಅಡ್ಡಗಟ್ಟಿ 7.11 ಕೋಟಿ ಹಣ ದರೋಡೆ ಮಾಡಿದ ಪ್ರಕರಣವನ್ನು ಬೆಂಗಳೂರು ಪೊಲೀಸರು ಯಶಸ್ವಿಯಾಗಿ ಬೇಧಿಸಿದ್ದಾರೆ. ಪ್ರಕರಣದಲ್ಲಿ 5.76 ಕೋಟಿ ಹಣ ಸೀಜ್ ಮಾಡಲಾಗಿದೆ.ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು, ಒಟ್ಟು 8 ಜನರ ಗುಂಪಿನಿಂದ ಕೃತ್ಯ ನಡೆದಿದೆ. ಈಗ ಸದ್ಯ 3 ಆರೋಪಗಳನ್ನು ಬಂಧಿಸಲಾಗಿದೆ. 5.76 ಕೋಟಿ ಹಣ ಸೀಜ್ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಒಟ್ಟು 8 ಜನರ ಗುಂಪಿನಿಂದ ಕೃತ್ಯ ನಡೆದಿದೆ. ಈಗ ಸದ್ಯ 3 ಆರೋಪಿಗಳನ್ನು ಬಂಧನ ಮಾಡಲಾಗಿದೆ. 30 ತಾಸು ತಡವಾಗಿ ಮಾಹಿತಿ ಬಂದಿದೆ. ಮೊದಲು ಡಿಜೆ ಹಳ್ಳಿಯಲ್ಲಿ ಆಗಿದೆ ಅಂತ ಮಾಹಿತಿ ಬಂದಿತ್ತು. ಘಟನೆ ನಡೆದ ಒಂದೂವರೆ ಗಂಟೆಯ ಬಳಿಕ ಮಾಹಿತಿ ನೀಡಿದ್ದಾರೆ. ತಕ್ಷಣವೇ ಎಲ್ಲಾ ಭಾಗಗಳಲ್ಲಿ ನಾಕಾಬಂಧಿ ಹಾಕಲಾಗಿತ್ತು. ದರೋಡೆಕೋರರು ಮೊಬೈಲ್ ಬಳಸುತ್ತಿರಲಿಲ್ಲ. ಸಿಸಿಟಿವಿ ಕಾಣದ ಸ್ಥಳಗಳಲ್ಲಿ ವಾಹನ ನಿಲುಗಡೆ ಮಾಡಿದ್ದರು. ತನಿಖೆಯ ದಾರಿ ತಪ್ಪಿಸಲು ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡಿದ್ದಾರೆ. ಘಟನೆ ನಡೆದ ದಿನ ಹಣ ತೆಗೆದುಕೊಂಡು ಹೋದ ವಾಹನ ಹಿಡಿಯಲಿಕ್ಕೆ ಆಗ್ಲಿಲ್ಲ. ಅನೇಕ ವಾಹನ ಬಳಸಿದ್ದಾರೆ. ವಾಹನಗಳ ನಂಬರ್ ಪದೇ ಪದೇ ಬದಲಿಸಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಸಿಸಿಟಿವಿ ಇಲ್ಲದ ಕಡೆಯಲ್ಲಿ ಆರೋಪಿಗಳು ಓಡಾಡಿದ್ದಾರೆ. ವಾಹನವನ್ನು ಸಿಸಿಟಿವಿ ಇಲ್ಲದ ಜಾಗದಲ್ಲಿ ತೆಗೆದುಕೊಂಡು ಹೋಗಿದ್ದಾರೆ. ಕೇರಳ, ತಮಿಳುನಾಡು, ಆಂಧ್ರ, ತೆಲಂಗಾಣ, ಗೋವಾದಲ್ಲಿ ಆರೋಪಿಗಳನ್ನು ಹುಡುಕಾಟ ನಡೆಸಿದ್ದಾರೆ. ಇನ್ನೂ ಹಣ ರಿಕವರಿ ಆಗಬೇಕು. 200 ಸ್ಟಾಫ್ ಬಳಕೆ ಮಾಡಲಾಗಿದೆ. 30 ಕ್ಕೂ ಹೆಚ್ಚು ಮಂದಿಯನ್ನ ವಿಚಾರಣೆ ಮಾಡಲಾಗಿದೆ. ಮೂವರು ಬಂಧಿಸಲಾಗಿದೆ ಎಂದು ವಿವರಿಸಿದ್ದಾರೆ.

ಗೋವಿಂದಪುರ ಪೇದೆ ಸೇರಿ ಮೂವರ ಬಂಧನವಾಗಿದೆ. ಮಾಜಿ ನೌಕರ, ಪೊಲೀಸ್ ಕಾನ್‌ಸ್ಟೇಬಲ್ ಬಂಧನ ಮಾಡಲಾಗಿದೆ. ಗೋಪಿ, ಜೋವಿಯಾರ್, ಅಣ್ಣಪ್ಪನಾಯ್ಕ್ ಬಂಧಿತ ಆರೋಪಿಗಳು. ಕ್ಲೂ ಇಲ್ಲದೆ ಆರೋಪಿಗಳು ಕೆಲಸ ಮಾಡಿದ್ದಾರೆ. ತಾಂತ್ರಿಕ ಮಾಹಿತಿ ಹಾಗೂ ಸ್ಥಳೀಯರಿಂದ ಮಾಹಿತಿ ಪಡೆದು ಬಂಧನ ಮಾಡಲಾಗಿದೆ. 6 ರಿಂದ ಏಂಟು ಮಂದಿ ಸೇರಿ ಕೃತ್ಯ ಎಸಗಿದ್ದಾರೆ. ಒಂದು ಇನ್ನೋವಾ ಗಾಡಿ ಚಿತ್ತೂರಿನಲ್ಲಿ ಸಿಕ್ಕಿತ್ತು. ಬೆಂಗಳೂರಿನ ಹೊರ ಭಾಗದಲ್ಲಿ ಹಣ ರಿಕವರಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ದರೋಡೆಕೋರರಿಗೆ ಶಿಕ್ಷೆ ಕೊಡಿಸುವ ನಿಟ್ಟಿನಲ್ಲಿ ತನಿಖೆ ನಡೆಸಲಾಗುತ್ತಿದೆ. ಪ್ರಕರಣವನ್ನ ಪ್ರತಿಷ್ಠೆಯಾಗಿ ತಗೆದುಕೊಂಡು ಕೆಲಸ ಮಾಡಲಾಗಿದೆ. ಸಿಸಿಬಿ ಡಿಸಿಪಿ, ದಕ್ಷಿಣ ವಿಭಾಗದ ಡಿಸಿಪಿ ಹಾಗೂ ಇಬ್ಬರು ಜಂಟಿ ಪೊಲೀಸ್ ಆಯುಕ್ತರಿಂದ ಕಾರ್ಯಚರಣೆ ಮಾಡಲಾಗಿದೆ. 3 ತಿಂಗಳಿAದ ಪ್ಲಾನಿಂಗ್ ಮಾಡಿದ್ದಾರೆ. 15 ದಿನದಿಂದ ರೇಖಿ ಮಾಡಿದ್ರು. ಸಿಸಿಟಿವಿ ಇಲ್ಲದೇ ಇರೋ ಜಾಗವನ್ನು ನೋಡಿಕೊಂಡು ರೆಖಿ ಮಾಡಿದ್ರು ಎಂದಿದ್ದಾರೆ.

ಸಿಎಂಎಸ್ ಕಂಪನಿಯ ಲೋಪ ಕೂಡ ಇದೆ. ಸಿಎಂಎಸ್ ಕಂಪನಿಯು ರೂಲ್ಸ್ ವೈಲೇಷನ್ ಮಾಡಿದ್ದಾರೆ. ವೆಹಿಕಲ್ ಇನ್‌ಚಾರ್ಜ್ ಶಾಮೀಲಾಗಿ ಕೃತ್ಯ ಎಸಗಿದ್ದಾರೆ. ವಾಹನದ ಚಾಲಕ ಹೊರಗುತ್ತಿಗೆ ಡ್ರೈವರ್ ಆಗಿದ್ದ ಎಂದು ತಿಳಿಸಿದ್ದಾರೆ.

## ಬಾಂಗ್ಲಾದೇಶದಲ್ಲಿ ಪ್ರಬಲ ಭೂಕಂಪ 10 ಮಂದಿ ಸಾವು



ಢಾ ಕಾ , ಬಾಂಗ್ಲಾದೇಶ: ಬಾಂಗ್ಲಾದೇಶದ ರಾಜಧಾನಿ ಢಾಕಾ ಸೇರಿದಂತೆ ದೇಶದ ಹಲವು ಭಾಗಗಳಲ್ಲಿ 5.7 ರಿಕ್ಟರ್ ಮಾಪಕದ ಭೂಕಂಪ ಸಂಭವಿಸಿದೆ. ವರದಿಗಳ ಪ್ರಕಾರ, ಈ ಭೂಕಂಪದಲ್ಲಿ ಕನಿಷ್ಠ 10 ಮಂದಿ ಜೀವ ಕಳೆದುಕೊಂಡಿದ್ದು, ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಅನೇಕ ಕಟ್ಟಡಗಳಿಗೆ ಗಂಭೀರ ಹಾನಿಯುಂಟಾಗಿದೆ.

ಭೂಕಂಪವು ಢಾಕಾದ ಅ ಗ ರ್ಗಾಂ ವ್ ನಿಂ ದ ಕೇವಲವ13 ಕಿಲೋಮೀಟರ್ ಇರುವ ನರಸಿಂಗ್ಡಿ ಜಿಲ್ಲೆಯಲ್ಲಿದ್ದು, ಭೂಮಿಯ ಕೇವಲ 10 ಕಿಲೋಮೀಟರ್ ಆಳದಲ್ಲೇ ಈ ಕಂಪನ ಉಂಟಾಗಿದೆ. ಬಾಂಗ್ಲಾದೇಶ ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ರಾಜಧಾನಿ ಢಾಕಾದಲ್ಲೇ ನಾಲ್ವರು ಮೃತಪಟ್ಟಿದ್ದು, ಹೆಚ್ಚಿನ ಹಾನಿ ನರಸಿಂಗ್ಡಿ ಪ್ರದೇಶದಲ್ಲಿ ಸಂಭವಿಸಿದೆ. ನರಸಿಂಗ್ಡಿಯಲ್ಲಿ ಐದು ಮಂದಿ ಸಾವನ್ನಪ್ಪಿದ್ದು, ಅನೇಕ ಪ್ರದೇಶಗಳಲ್ಲಿ ಕಟ್ಟಡ ಕುಸಿತ, ಗೋಡೆ ಬಿರುಕು, ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ಗಳಿಂದ ಬೆಂಕಿ ಕಾಣಿಸಿಕೊಂಡಿದೆ. ಉಪನಗರ ಬಂದರು ಪಟ್ಟಣ ನಾರಾಯಣಗಂಜಲ್ಲೂ ಒಬ್ಬರು ಮೃತಪಟ್ಟಿರುವ ಮಾಹಿತಿ ಲಭ್ಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಗಾಯಗೊಂಡವರ ಸಂಖ್ಯೆ ಕೈಗಾರಿಕಾ ಪ್ರದೇಶಗಳಲ್ಲಿ ಕಂಡುಬರುತ್ತಿದೆ. ಢಾಕಾ ಹೊರವಲಯ ಗಾಜಿಪುರದ ಕೈಗಾರಿಕಾ ಪಟ್ಟಣದಲ್ಲಿ ಭೂಕಂಪ ಸಂಭವಿಸಿದ ಕ್ಷಣದಲ್ಲೇ ನೂರಾರು ಕಾರ್ಮಿಕರು ಭಯಭೀತರಾಗಿ ಕಟ್ಟಡಗಳಿಂದ ಹೊರಬರಲು ಓಡಿದರು.

ಈ ಓಟಾಟದ ವೇಳೆ ಅನೇಕರು ಮೆಟ್ಟಿಲಿನಲ್ಲಿ ಜಾರಿ ಬಿದ್ದು ಗಾಯಗೊಂಡಿದ್ದಾರೆ. ವಿವಿಧ ಕಾರ್ಖಾನೆಗಳಲ್ಲಿ ಕನಿಷ್ಠ 100 ಕಾರ್ಮಿ ಕರು ಗಾಯಗೊಂಡಿದ್ದಾರೆ ಎಂದು ಹೇಳಲಾಗಿದೆ. ಕೈಗಾರಿಕಾ ವಲಯಗಳಿಗೆ ಗಂಭೀರ ಹಾನಿಯಾಗಿದೆ ಎಂದೂ ಪ್ರಾಥಮಿಕ ವರದಿಗಳು ತಿಳಿಸಿವೆ. ಕೆಲವು ಉತ್ಪಾದನಾ ಘಟಕಗಳಲ್ಲಿ ಯಂತ್ರೋಪ ಕರಣಗಳು ಹಾನಿಗೊಳಗಾಗಿದ್ದು, ಹಲವೆಡೆ ತಾತ್ಕಾಲಿಕವಾಗಿ ಉತ್ಪಾದನಾ ಕೆಲಸ ನಿಲ್ಲಿಸಲಾಗಿದೆ.

ಭೂಕಂಪನದ ಸಮಯದಲ್ಲಿ ಜನರು ಮನೆಗಳು, ಕಛೇರಿಗಳು, ಮಾರುಕಟ್ಟೆಗಳು ಮತ್ತು ಅಪಾರ್ಟ್ಮೆಂ ಟ್‌ಗಳಿಂದ ಹೊರಬರುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಬಹುಮಹಡಿ ಕಟ್ಟಡಗಳಲ್ಲಿ ನಡುಕು ತೀವ್ರವಾಗಿ ಅನುಭವವಾಗಿದ್ದರಿಂದ ಜನರು ಬೇಗನೆ ಕಟ್ಟಡದಿಂದ ಹೊರಬರಲು ಯತ್ನಿಸಿದರು. ಇದರಿಂ ದಲೇ ಗಾಯಗೊಂಡವರ ಸಂಖ್ಯೆ ಏರಿಕೆಯಾಗಿದೆ.

ಅನೇಕ ಕಟ್ಟಡಗಳಲ್ಲಿ ವಿದ್ಯುತ್ ತಂತಿಗಳು ಕಳಚಿ ಬೆಂಕಿ ಕಾಣಿಸಿಕೊಂಡಿವೆ. ಅಗ್ನಿಶಾಮಕ ಸಿಬ್ಬಂದಿ ಹಲವು ಸ್ಥಳಗಳಲ್ಲಿ ತುರ್ತು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಲು ಶ್ರಮಿಸಿದರು. ದಟ್ಟ ಹೊಗೆ ಪ್ರದೇಶವನ್ನು ಆವರಿಸಿದ್ದರಿಂದ ನಿವಾಸಿಗಳು ಮತ್ತಷ್ಟು ಭೀತಿಗೊಳಗಾದರು.

ಈ ದುರಂತದ ನಂತರ, ಸರ್ಕಾರ ತುರ್ತು ರಕ್ಷಣಾ ತಂಡಗಳನ್ನು ನಿಯೋಜಿಸಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಕಟ್ಟಡಗಳ ಪರಿಶೀಲನೆ ನಡೆಸುವುದು, ಅಪಾಯದ ಪ್ರದೇಶಗಳನ್ನು ಖಾಲಿ ಮಾಡಿಸುವ ಕಾರ್ಯಾ ಚರಣೆ ಮುಂದುವರೆದಿದೆ. ನರಸಿಂಗಿ ಮತ್ತು ಗಾಜಿಪುರದಲ್ಲಿ SDRF ಮತ್ತು ಸ್ಥಳೀಯ ಪೊಲೀಸರು ಶೋಧ, ರಕ್ಷಣಾ ಕಾರ್ಯಾಚ ರಣೆಯಲ್ಲಿ ತೊಡಗಿದ್ದಾರೆ.

## ರಾಜಧಾನಿ ದೆಹಲಿಯಲ್ಲಿ ಹೆಚ್ಚಾದ ವಾಯು ಮಾಲೀನ್ಯ: ವರ್ಕ್ ಫ್ರಂ ಹೋಮ್‌ಗೆ ಶಿಫಾರಸು

**ನವದೆಹಲಿ:** ದಿನೇ ದಿನೇ ವಿಷಕಾರಿ ಧೂಳು ಮಂಜಿನಿಂದ ರಾಜಧಾನಿ ದೆಹಲಿ ಈಗ ಗ್ಯಾಸ್ ಚೇಂಬರ್‌ಗೆ ಸಮಾನವಾಗಿ ಬದಲಾಗಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (CPCB)ಯ ವರದಿಯ ಪ್ರಕಾರ, ದೆಹಲಿ-ಎನ್‌ಸಿಆರ್‌ನಲ್ಲಿ ವಾಯು ಗುಣಮಟ್ಟ ಇನ್ನೂ ಕಳಪೆಯಾಗುತ್ತಿದ್ದು, ಸದ್ಯಕ್ಕೆ ಇದರಿಂದ ಮುಕ್ತಿ ಸಿಗುವ ಲಕ್ಷಣಗಳೇ ಇಲ್ಲ. ನಿನ್ನೆ 373 ಇದ್ದ AQI ಇಂದು (ನವೆಂಬರ್ 22, 2025) 360ಕ್ಕೆ ಇಳಿದರೂ, 'ವೆರಿ ಪೂರ್' ವರ್ಗದಲ್ಲೇ ಇದೆ. ಕೆಲವು ಪ್ರದೇಶಗಳಲ್ಲಿ 400ಕ್ಕೂ ಮೀರಿದ 'ಸೀವರ್' ಮಟ್ಟ ಸೇರಿದ್ದು, ಇದು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಿದೆ. ತಜ್ಞರು ಸಲಹೆ ನೀಡಿದಂತೆ, ಸ್ವಲ್ಪ ದಿನಗಳ ಕಾಲ ಮನೆಯಿಂದ ಹೊರ ಬರದೇ ಮನೆಯಲ್ಲೇ ಉಳಿಯುವುದು ಉತ್ತಮ ಎಂದು ಎಚ್ಚರಿಕೆ ನೀಡಿದ್ದಾರೆ.


ಈ ಸಂದರ್ಭದಲ್ಲಿ, ವಾಯು ಗುಣಮಟ್ಟ ನಿರ್ವಹಣಾ ಆಯೋಗ (CAQM) ದೆಹಲಿ-ಎನ್‌ಸಿಆರ್‌ನಾದ್ಯಂತ 3ನೇ ಹಂತದ ಶ್ರೇಣೀಕೃತ ಪ್ರತಿಕ್ರಿಯಾ ಕಾರ್ಯಯೋಜನೆ (GRAP-3)ಯ ಕ್ರಮಗಳನ್ನು ಜಾರಿಗೊಳಿಸಿದೆ. GRAP-3 ಅಡಿಯಲ್ಲಿ, ಸರ್ಕಾರಿ, ಖಾಸಗಿ ಮತ್ತು ಪುರಸಭೆಯ ಕಚೇರಿಗಳಲ್ಲಿ ಕೇವಲ 50% ಸಿಬ್ಬಂದಿ ಕಾರ್ಯನಿರ್ವಹಿಸುವಂತೆ ಆದೇಶಿಸಲಾಗಿದೆ. ಉಳಿದವರು ಮನೆಯಿಂದಲೇ ಕೆಲಸ ಮಾಡಬೇಕು. ವಿಶೇಷವಾಗಿ, ಕೇಂದ್ರ ಸರ್ಕಾರಿ ಕಚೇರಿಗಳಲ್ಲಿ ಸಂಪೂರ್ಣ WFHಗೆ ಸಾಧ್ಯವಾದಷ್ಟು ಆದ್ಯತೆ ನೀಡಲು ಸಲಹೆ ನೀಡಲಾಗಿದೆ. ಇದರ ಜೊತೆಗೆ, ನಿರ್ಮಾಣ ಕಾರ್ಯಗಳು, ಡೀಸೆಲ್ ಜನರೇಟರ್‌ಗಳ ಬಳಕೆ, ಖನಿಜ ಆಧಾರಿತ ಇಂಧನಗಳ ಉಪಯೋಗ ಮತ್ತು ಹೆಚ್ಚಿನ ಎಮಿಷನ್‌ಗಳಿರುವ ವಾಹನಗಳಿಗೆ ಕಟ್ಟುನಿಟ್ಟು ನಿರ್ಬಂಧಗಳನ್ನು ಹೇರಲಾಗಿದೆ.

CAQMಯ ಅಧ್ಯಕ್ಷ ಹೇಳಿದಂತೆ, ಈ ಕ್ರಮಗಳು ವೈಜ್ಞಾನಿಕ ಮೌಲ್ಯಮಾಪನ ಮತ್ತು ತಜ್ಞರ ಸಲಹೆಯ ಫಲಿತಾಂಶ. ಇನ್ನೂ AQI ಕುಸಿದರೆ GRAP-4ಗೆ ತೆರಳುವ ಸಾಧ್ಯತೆಯಿದ್ದು, ವಾಹನ ಸಂಚಾರ ನಿರ್ಬಂಧಗಳು ಮತ್ತು ಕಟ್ಟಡ ನಿರ್ಮಾಣ ಸ್ಥಗಿತದಂತಹ ಕಠಿಣ ಕ್ರಮಗಳಿವೆ. ಭಾರತೀಯ ಹವಾಮಾನ ಇಲಾಖೆ (IMD)ಯ ವರದಿಯ ಪ್ರಕಾರ, ಇಂದು ದೆಹಲಿಯಲ್ಲಿ ಕನಿಷ್ಠ ತಾಪಮಾನ 11.8° ಸೆಲ್ಸಿಯಸ್ ದಾಖಲಾಗಿದ್ದು, ಗರಿಷ್ಠ 28.2° ಸೆಲ್ಸಿಯಸ್ ತಲುಪುವ ಸಾಧ್ಯತೆ ಇದೆ. ಆದರೆ ಚಳಿಗಾಲದ ಈ ಹವಾಮಾನವು ಮಾಲಿನ್ಯವನ್ನು ಹೆಚ್ಚಿಸುತ್ತಿದೆ, ಏಕೆಂದರೆ ಗಾಳಿ ಸ್ಥಿರವಾಗಿ ಇರುವುದರಿಂದ ಧೂಳು ಮತ್ತು ವಿಷಾಂಶಗಳು ಹೆಚ್ಚಾಗಿದೆ. IMDಯ ಪ್ರಕಾರ, ಈ ಬಗ್ಗೆ ಇಂಟರ್‌ನೆಟ್‌ನಲ್ಲಿ ತಂಪಾದ ಹವಾಮಾನ ಮತ್ತು ಸ್ಪಷ್ಟ ಆಕಾಶವಿದ್ದರೂ, ಧೂಳು ಮಂಜಿನಿಂದ ದೃಶ್ಯತೆ ಕಡಿಮೆಯಾಗಿದೆ. ವಿಶೇಷವಾಗಿ, ಇಂದು ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ತಾಪಮಾನ 24° ಸೆ. ಇರುವುದರಿಂದ, ಬಾಹ್ಯ ಚಟುವಟಿಕೆಗಳು ಇನ್ನಷ್ಟು ಅಪಾಯಕಾರಿಯಾಗಿವೆ.

ದೆಹಲಿ ಸರ್ಕಾರವು ಈಗಾಗಲೇ ಶಾಲೆಗಳಲ್ಲಿ ಹೊರಾಂಗಣ ಚಟುವಟಿಕೆಗಳು, ಕ್ರೀಡೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸುವಂತೆ ಆದೇಶಿಸಿದೆ. ಮಕ್ಕಳು, ವೃದ್ಧರು ಮತ್ತು ಆಸ್ಥಮಾ ರೋಗಿಗಳಿಗೆ ಇದು ತೀವ್ರ ಪರಿಣಾಮ ಬೀರುತ್ತಿದ್ದು, ಉಸಿರಾಟದ ತೊಂದರೆ, ಚರ್ಮ ಒಡೆಯುವುದು ಮತ್ತು ಉರಿ-ಬೇನೆಯಂತಹ ಸಮಸ್ಯೆಗಳು ಹೆಚ್ಚಾಗಿವೆ. ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ಮಾನ್ಯತೆ ಪಡೆದ ಕ್ರೀಡಾ ಸಂಘಗಳಿಗೂ ಒಂದೇ ರೀತಿ ಸಲಹೆ ನೀಡಲಾಗಿದ್ದು, ಆನ್‌ಲೈನ್ ವರ್ಗಗಳು ಮತ್ತು ವರ್ಚುಯಲ್ ಚಟುವಟಿಕೆಗಳನ್ನು ಉತ್ತೇಜಿಸಲಾಗುತ್ತಿದೆ. ಈ ವರ್ಷದ ಮಾಲಿನ್ಯ ಹೆಚ್ಚಳಕ್ಕೆ ಕಾರಣಗಳು: ವಾಹನಗಳ ಎಮಿಷನ್‌ಗಳು, ಗ್ರಾಮೀಣ ಪ್ರದೇಶಗಳಿಂದ ಬರುವ ಧೂಳು ಮತ್ತು ಚಳಿಗಾಲದ ಸ್ಥಿರ ಹವಾಮಾನ. CAQMಯ ಪ್ರಕಾರ, 2024ರ ನವೆಂಬರ್‌ಗಿಂತ ಈ ವರ್ಷ AQI 20% ಹೆಚ್ಚಾಗಿದೆ. ತಜ್ಞರು ಸಲಹೆ ನೀಡಿದಂತೆ, ವೈಯಕ್ತಿಕ ಮಟ್ಟದಲ್ಲಿ ಕಾರ್‌ಪೂಲಿಂಗ್, ಸೈಕಲಿಂಗ್ ಮತ್ತು ಕಡಿಮೆ ಪ್ಲಾಸ್ಟಿಕ್ ಬಳಕೆಯ ಮೂಲಕ ಸಹಾಯ ಮಾಡಬಹುದು.

ದೆಹಲಿಯ ಈ ಮಾಲಿನ್ಯ ಸಂಕಷ್ಟ ನಮಗೆಲ್ಲರಿಗೂ ಎಚ್ಚರಿಕೆಯಾಗಿದೆ. ನಿಯಮಿತ ಮೇಲ್ವಿಚಾರಣೆ ಮತ್ತು ಸಹಕಾರದ ಮೂಲಕ ಮಾತ್ರ ಇದರಿಂದ ಮುಕ್ತಿ ಸಾಧಿಸಬಹುದು. ಹೆಚ್ಚಿನ ಮಾಹಿತಿಗೆ CPCB ಅಥವಾ CAQM ವೆಬ್‌ಸೈಟ್‌ಗಳನ್ನು ಸಂಪರ್ಕಿಸಿ.

## ಒಂದೇ ಕುಟುಂಬದ ನಾಲ್ವರು ಬಾವಿಗೆ ಹಾರಿ ಆ*ತ್ಮಹ*ತ್ಯೆ



**ಧಾರವಾಡ** :ತಾಲೂಕಿನ ಚಿಕ್ಕಮಲ್ಲಿಗವಾಡ ಗ್ರಾಮದಲ್ಲಿ ಗುರುವಾರ ರಾತ್ರಿ ಘೋರ ದುರಂತ ನಡೆದಿದೆ. ಒಂದೇ ಕುಟುಂಬದ ನಾಲ್ವರು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ದಾರುಣ ಘಟನೆಯಿಂದ ಗ್ರಾಮದಲ್ಲಿ ಆಘಾತ ಮತ್ತು ಆಕ್ರಂದನ ಮನೆಮಾಡಿದ್ದು, ಸಂಬಂಧಿಕರು, ನೆರೆಹೊರೆಯವರು ನುಂಗಲಾರದ ಸ್ಥಿತಿಯಲ್ಲಿದ್ದಾರೆ.

ಅಜ್ಜ ವಿಠ್ಠಲರಾವ್ ಶಿಂಧೆ (85 ವರ್ಷ) ಮತ್ತು ತಂದೆ ನಾರಾಯಣ ಶಿಂಧೆ (42 ವರ್ಷ), ಇಬ್ಬರು ಚಿಕ್ಕ ಮಕ್ಕಳು ಶಿವರಾಜ (12 ವರ್ಷ), ಶ್ರೀನಿಧಿ (10 ವರ್ಷ) ಒಂದೇ ಕುಟುಂಬದ ನಾಲ್ವರು ಮೃತಪಟ್ಟಿದ್ದಾರೆ. ಗ್ರಾಮದ ಹೊರಗಿನ ಹಳೇ ಬಾವಿಯ ಬಳಿ ಇವರ ನಾಲ್ವರ ಚಪ್ಪಲಿಗಳು ದಂಡೆಯ ಮೇಲೆ ಸಾಲು ಸಾಲಾಗಿ ಇಡಲಾಗಿದ್ದವು. ಶುಕ್ರವಾರ ಬೆಳಗ್ಗೆ ಗ್ರಾಮಸ್ಥರು ಬಾವಿಯಲ್ಲಿ ನಾಲ್ವರ ದೇಹಗಳು ಕಂಡು ಆಘಾತಕ್ಕೊಳಗಾದರು. ತಕ್ಷಣ ಸ್ಥಳಕ್ಕೆ ಧಾರವಾಡ ಗ್ರಾಮಾಂತರ ಪೊಲೀಸರು, ಅಗ್ನಿಶಾಮಕ ದಳ ಮತ್ತು ಸ್ಥಳೀಯರು ಧಾವಿಸಿ ದೇಹಗಳನ್ನು ಹೊರತೆಗೆದಿದ್ದಾರೆ.

ಆತ್ಮಹತ್ಯೆಗೆ ಕಾರಣ? ಪ್ರಾಥಮಿಕ ತನಿಖೆಯಲ್ಲಿ ಕೌಟುಂಬಿಕ ಸಮಸ್ಯೆಗಳೇ ಈ ದುರಂತಕ್ಕೆ ಕಾರಣವೆಂದು ಶಂಕಿಸಲಾಗಿದೆ. ಆದರೆ ನಿಖರ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಸ್ಥಳೀಯರ ಪ್ರಕಾರ ಕುಟುಂಬದಲ್ಲಿ ಕೆಲವು ದಿನಗಳಿಂದ ಒತ್ತಡ ಮತ್ತು ಜಗಳಗಳಿದ್ದವು ಎನ್ನಲಾಗುತ್ತಿದೆ. ಪೊಲೀಸರು ಸ್ಥಳ ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಈ ಘಟನೆಯಿಂದ ಚಿಕ್ಕಮಲ್ಲಿಗವಾಡ ಗ್ರಾಮದಲ್ಲಿ ನೀರವ ಮೌನ ಆವರಿಸಿದ್ದು, ಎಲ್ಲೆಡೆ ದುಃಖ ಮತ್ತು ಆತಂಕದ ವಾತಾವರಣ ನಿರ್ಮಾಣವಾಗಿದೆ.

## ಹೃದಯದಿಂದ ಓಡಿ, ಭೂಮಿಗಾಗಿ ಓಡಿ" ಬೆಂಗಳೂರಿನಲ್ಲಿ ಗ್ರೀನ್ ಹಾರ್ಟ್‌ಫುಲ್‌ನೆಸ್ ರನ್



**ಬೆಂಗಳೂರು:** ಪರಿಸರ ಸಂರಕ್ಷಣೆ, ಸ್ವಾಸ್ಥ್ಯ ಮತ್ತು ಮೈಂಡ್‌ಫುಲ್ ಜೀವನಶೈಲಿಯನ್ನು ಉತ್ತೇಜಿಸುವ ಗುರಿಯೊಂದಿಗೆ ಹಾರ್ಟ್‌ಫುಲ್‌ನೆಸ್ ಸಂಸ್ಥೆಯು ಆಯೋಜಿಸಿದ್ದ ಗ್ರೀನ್ ಹಾರ್ಟ್‌ಫುಲ್‌ನೆಸ್ ರನ್-2025 ನಗರದಲ್ಲಿ ಮಹತ್ವದ ಸಂದೇಶ ನೀಡಿದೆ. ನವೆಂಬರ್ 22ರಂದು ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಈ ವಿಶೇಷ ರನ್ ಜರುಗಿತು. ಎಲ್ಲಾ ವಯೋಮಾನದ ಪರಿಸರ ಉತ್ಸಾಹಿಗಳು, ಆರೋಗ್ಯಾಭಿಮಾನಿಗಳು, ವಿದ್ಯಾರ್ಥಿಗಳು "ಹೃದಯದಿಂದ ಓಡಿ, ಭೂಮಿಗಾಗಿ ಓಡಿ" ಎಂಬ ವಿಷಯದ ಅಡಿಯಲ್ಲಿ ಒಗ್ಗೂಡಿ ಭಾಗವಹಿಸಿದರು.

ಮಾರ್ಗ ದರ್ಶಿತ ಹಾರ್ಟ್‌ಫುಲ್‌ನೆಸ್ ವಿಶ್ರಾಂತಿ ವಿಧಾನ ಮತ್ತು ಧ್ಯಾನ ಅಧಿವೇಶನದ ನಂತರ ಓಟಗಾರರು 3K ಮತ್ತು 5K ವಿಭಾಗಗಳಲ್ಲಿ ಭಾಗವಹಿಸಿದರು. ಇದನ್ನು ಪರಿಸರಸ್ನೇಹಿ ಕಾರ್ಯಕ್ರಮವಾಗಿ ವಿನ್ಯಾಸಗೊಳಿಸಲಾಗಿದೆ. ಈ ಕಾರ್ಯಕ್ರಮವು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದೊಂದಿಗೆ ನಡೆಯುತ್ತಿದೆ ಗ್ರೀನ್ ಹಾರ್ಟ್‌ಫುಲ್‌ನೆಸ್ ರನ್ ಎಂದರೆ ಪರಿಸರ ಮತ್ತು ಆಂತರಿಕ ಪ್ರಜ್ಞೆ ಎರಡನ್ನೂ ಜಾಗೃತಗೊಳಿಸುವುದಾಗಿದೆ," ಎಂದು ಹಾರ್ಟ್‌ಫುಲ್‌ನೆಸ್ ಸಂಸ್ಥೆಯ ಬೆಂಗಳೂರಿನ ಕಾರ್ಯಕ್ರಮ ಸಂಯೋಜಕರಾದ ಗಣೇಶ್ ಮತ್ತು ಶಕ್ತಿಕುಮಾರ್ ಹೇಳಿದರು. ಈ ಕಾರ್ಯಕ್ರಮದ ನಂತರ ನವೆಂಬರ್ 29, 2025 ರಂದು ಬೂತನಹಳ್ಳಿಯಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಲಿದೆ. ಯೋಜನೆಯ ಮೊದಲನೇ ಹಂತದಲ್ಲಿ 3000ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗುವುದು.

ಅತಿಥಿಳಾಗಿ ಕರ್ನಾಟಕ ಶಾಸನಸಭೆಯ ಬಸವನಗುಡಿ ಶಾಸಕರಾದ ಮಾನ್ಯ ಶ್ರೀ ಎಲ್. ಎ. ರವಿ ಸುಬ್ರಹ್ಮಣ್ಯ, ಪೊಲೀಸ್ ವರಿಷ್ಠಾಧಿಕಾರಿ, ಲೋಕಾಯುಕ್ತರಾದ ಶ್ರೀ. ಶಿವಪ್ರಕಾಶ್ ದೇವರಾಜು, ಐಪಿಎಸ್, ಅದಮ್ಯ ಚೇತನ ಫೌಂಡೇಶನ್‌ನ ಅಧ್ಯಕ್ಷರು ಮತ್ತು ಸಹ-ಸಂಸ್ಥಾಪಕರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ನಟ ಶ್ರೀ ನಿರಂಜನ್ ಶೆಟ್ಟಿ ಮತ್ತು ಹಾರ್ಟ್‌ಫುಲ್‌ನೆಸ್ ಇನ್‌ಸ್ಟಿಟ್ಯೂಟ್ ವಲಯ ಸಂಯೋಜಕರಾದ ಶ್ರೀ ಗಿರೀಶ ಟೋಟ್ಲೂರ್ ಅವರು ಓಟಕ್ಕೆ ಧ್ವಜ ಹಾರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾನ್ಯ ಶ್ರೀ ರವಿ ಸುಬ್ರಹ್ಮಣ್ಯ ಅವರು, "ಇಂತಹ ಉಪಕ್ರಮಗಳು ದೈಹಿಕ ಆರೋಗ್ಯ, ಮಾನಸಿಕ ಯೋಗಕ್ಷೇಮ ಮತ್ತು ಪರಿಸರ ಅರಿವನ್ನು ಸುಂದರವಾಗಿ ಸಂಯೋಜಿಸುತ್ತವೆ. 'ಹೃದಯದಿಂದ ಓಡಿ, ಭೂಮಿಗಾಗಿ ಓಡಿ' ಎಂಬ ವಿಷಯವು ನಿಜವಾದ ಪ್ರಗತಿಯು ಸಾಮರಸ್ಯದಲ್ಲಿ ಅಡಗಿದೆ ಎಂದು ನಮಗೆ ನೆನಪಿಸುತ್ತದೆ - ಜನರು, ಪ್ರಕೃತಿ ಮತ್ತು ನಾವು ವಾಸಿಸುವ ಭೂಮಿಯ ನಡುವಿನ ಸಾಮರಸ್ಯ.

ಈ ರೋಮಾಂಚಕ ನಗರದ ನಾಗರಿಕರಾಗಿ, ನಮ್ಮ ಅರಣ್ಯಗಳು, ಉದ್ಯಾನವನಗಳು, ನಮ್ಮ ಮರಗಳು ಮತ್ತು ನಮ್ಮ ಗಾಳಿಯನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ. ಒಂದು ಸಸಿಯನ್ನು ನೆಡುವುದು, ಪ್ಲಾಸ್ಟಿಕ್ ಕಡಿಮೆ ಮಾಡುವುದು ಅಥವಾ ಸುಸ್ಥಿರ ಜೀವನಶೈಲಿಯನ್ನು ಆರಿಸುವಂತಹ ಸಣ್ಣ ಕಾರ್ಯಗಳು ಬದಲಾವಣೆಯ ತರಂಗಗಳನ್ನು ಸೃಷ್ಟಿಸುತ್ತವೆ. ಮತ್ತು ಸಾವಿರಾರು ಹೃದಯಗಳು ಮಹದೋದ್ದೇಶದಿಂದ ಒಗ್ಗೂಡಿದಾಗ, ಆ ತರಂಗವು ಒಂದು ಅಲೆಯಾಗುತ್ತದೆ. ಹಾರ್ಟ್‌ಫುಲ್‌ನೆಸ್ ತನ್ನ ಉಪಕ್ರಮಗಳ ಮೂಲಕ ಗಮನಾರ್ಹ ಬದಲಾವಣೆಯನ್ನು ಮಾಡಲು ಮಾಡುತ್ತಿರುವ ಪ್ರಯತ್ನಗಳಿಗಾಗಿ ನಾನು ಅಭಿನಂದಿಸುತ್ತೇನೆ."

ಶ್ರೀಮತಿ ತೇಜಸ್ವಿನಿ ಅವರು, "'ಹೃದಯದಿಂದ ಓಡಿ, ಭೂಮಿಗಾಗಿ ಓಡಿ' ಎಂಬ ವಿಷಯವು ನನ್ನಲ್ಲಿ ಗಾಢವಾಗಿ ಪ್ರತಿಧ್ವನಿಸುತ್ತಿದೆ. ಅದಮ್ಯ ಚೇತನದಲ್ಲಿ, ನಾವು ವಾಸಿಸುವ ಜಗತ್ತಿನ ಬಗ್ಗೆ ಕಾಳಜಿ ವಹಿಸುವುದರೊಂದಿಗೆ ಸಮಾಜ ಸೇವೆಯು ಪ್ರಾರಂಭವಾಗುತ್ತದೆ ಎಂದು ನಾವು ನಂಬಿದ್ದೇವೆ. ಅದು ನಮ್ಮ ಹಸಿರು ಉಪಕ್ರಮಗಳು, ಶೂನ್ಯ-ತ್ಯಾಜ್ಯ ಅಡುಗೆಮನೆಗಳು ಅಥವಾ ಸಸಿ ನೆಡುವ ಅಭಿಯಾನಗಳ ಮೂಲಕ ಇರಲಿ, ಸಾಮೂಹಿಕ ಉಪಕ್ರಮವು ನಿಜವಾದ, ಶಾಶ್ವತ ಪರಿಣಾಮವನ್ನು ಉಂಟುಮಾಡುವುದನ್ನು ನಾವು ಕಂಡಿದ್ದೇವೆ.

ಇಂದಿನ ಕಾರ್ಯಕ್ರಮವು ಆರೋಗ್ಯ ಮತ್ತು ಕರುಣೆ ಒಟ್ಟಿಗೆ ಸಾಗುತ್ತವೆ ಎಂಬುದನ್ನು ನಮಗೆ ನೆನಪಿಸುತ್ತದೆ. ನಾವು ಮೈಂಡ್‌ಫುಲ್‌ನೆಸ್ ಮೂಲಕ ನಮ್ಮ ಆಂತರಿಕ ಯೋಗಕ್ಷೇಮವನ್ನು ಪೋಷಿಸುವಾಗ ಮತ್ತು ಅದೇ ಕಾಳಜಿಯನ್ನು ಪ್ರಕೃತಿಗೆ ವಿಸ್ತರಿಸಿದಾಗ, ಮುಂದಿನ ಪೀಳಿಗೆಗೆ ಬಲವಾದ, ಹೆಚ್ಚು ಸುಸ್ಥಿರವಾದ ಭವಿಷ್ಯವನ್ನು ನಿರ್ಮಿಸುತ್ತೇವೆ."

ಗ್ರೀನ್ ರನ್, ಗ್ರೀನ್ ಕಾನ್ಹಾ ಮತ್ತು ಟ್ರೀ ಫಾರ್ ಹಾರ್ಟ್ ನಂತಹ ಉಪಕ್ರಮಗಳ ಮೂಲಕ, ಹಾರ್ಟ್‌ಫುಲ್‌ನೆಸ್ ಸಂಸ್ಥೆಯು 160ಕ್ಕೂ ಹೆಚ್ಚು ದೇಶಗಳಲ್ಲಿ ಮೈಂಡ್‌ಫುಲ್ ಜೀವನಶೈಲಿ ಮತ್ತು ಪರಿಸರ ಮೇಲ್ವಿಚಾರಣೆಗೆ ಸ್ಫೂರ್ತಿ ನೀಡುವುದನ್ನು ಮುಂದುವರೆಸಿದೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.